CC No.:168/2019
P.W.:1

ಈ ದಿನ ದಿಃ24.08.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ- ಆರೋಪಿ ಪರ ಶ್ರೀ ಕೆ.ಪಿ.ಪಿ ವಕೀಲರಿಂದಃ-**

ನಾನು ಗೃಹಿಣಿಯಾಗಿರುತ್ತೇನೆ. ನಾನು ಬೇರೆ ಯಾವುದು ಕೆಲಸ ಮಾಡುವುದಿಲ್ಲ. ನ್ಯಾಯಾಲಯಕ್ಕೆ ಸಲ್ಲಿಸಿದ ಖಾಸಗಿ ದೂರು, ಪ್ರಮಾಣೀಕೃತ ಹೇಳಿಕೆ ಮತ್ತು ವಕೀಲರ ಮೂಲಕ ಕಳುಹಿಸಿದ ನೋಟಿಸಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುತ್ತದೆ. ನನ್ನ ಪ್ರಮಾಣ ಪತ್ರದಲ್ಲಿ, ಖಾಸಗಿ ದೂರು ಮತ್ತು ವಕೀಲರ ಮೂಲಕ ಕಳುಹಿಸಿದ ನೋಟಿಸಿನಲ್ಲಿ ನಾನು ಬಡ್ಡಿ ವ್ಯವಹಾರ ಮಾಡುತ್ತೇನೆಂದು ಬರೆಸಿರುವುದು ಸುಳ್ಳು ಇರುತ್ತದೆ.

ಆರೋಪಿತಳು ನನಗೆ ಕಳೆದ 20 ವರ್ಷಗಳಿಂದ ಪರಿಚಿತಳಿರುತ್ತಾಳೆ. ಆರೋಪಿ ಹೊಸೂರು ಗ್ರಾಮದವರಾಗಿರುತ್ತಾರೆ. ಆರೋಪಿತಳು ಹಾರೋಹಳ್ಳಿ ಮತ್ತು ಹೊಸೂರು ಎರಡು ಗ್ರಾಮದಲ್ಲಿ ಇರುತ್ತಿದ್ದರು. ಆರೋಪಿತಳ ಸ್ವಂತ ಊರು ನನಗೆ ಗೊತ್ತಿರುವುದಿಲ್ಲ. ಆರೋಪಿತಳು ಪಿಡಿಒ ಆಗಿರುತ್ತಾರೆ. ಆರೋಪಿತಳು ಪಿಡಿಒ ಆಗಿ ಎಲ್ಲಿ ಕೆಲಸ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ನಾನು ಆದಾಯ ತೆರಿಗೆ ಪಾವತಿದಾರಳಾಗಿರುವುದಿಲ್ಲ.

2017 ರಲ್ಲಿ ಆರೋಪಿತಳು ನಮ್ಮ ಮನೆಗೆ ಬಂದು ಹಣ ಕೇಳಿರುತ್ತಾಳೆ, ಆದರೆ ನಿಖರವಾದ ದಿನಾಂಕ ಹೇಳಲು ನೆನಪಿರುವುದಿಲ್ಲ. ಪ್ರಕರಣ ದಾಖಲಿಸುವ ದಿನಾಂಕದಿಂದ 6 ತಿಂಗಳ ಹಿಂದೆ ಹಣ ಪಡೆದಿದ್ದರು ಅದರ ನಿಖರವಾದ ದಿನಾಂಕ ಹೇಳಲು ನೆನಪಿಲ್ಲ. 6 ತಿಂಗಳಲ್ಲಿ ಹಣ ಹಿಂದಿರುಗಿಸುವುದಾಗಿ ಆರೋಪಿತಳು ಹೇಳಿರುತ್ತಾಳೆ.

ನೋಟ್ ಬ್ಯಾನ್ ವಿಚಾರ ನನಗೆ ಗೊತ್ತಿರುತ್ತದೆ. ಸದರಿ ನೋಟ್ ಬ್ಯಾನ್ ಸಂದರ್ಭದಲ್ಲಿ ನಾನು ಹಳೆಯ ನೋಟುಗಳನ್ನು ಬದಲಾವಣೆ ಮಾಡಿಕೊಂಡಿರುವುದಿಲ್ಲ. 2016 ನವೆಂಬರ್ 9 ರಿಂದ ಏಪ್ರಿಲ್ 2017 ರ ಅವಧಿಯಲ್ಲಿ ಹಳೆಯ 500 ಮತ್ತು 1000 ನೋಟುಗಳನ್ನು ಬದಲಾವಣೆ ಮಾಡಿಕೊಳ್ಳಲು ನನ್ನ ಬಳಿ ಯಾವುದೇ ನೋಟುಗಳು ಇರಲಿಲ್ಲ.

ಕರ್ನಾಟಕ ಬ್ಯಾಂಕ್ ಮತ್ತು ಮುತ್ತುಟ್ ಬ್ಯಾಂಕಿನಿಂದ ಹಣ ಪಡೆದು ಆರೋಪಿತಳಿಗೆ ಹಣ ನೀಡಿರುತ್ತೇನೆ. ಯಾವ ದಿನಾಂಕದಂದು ಬ್ಯಾಂಕಿನಿಂದ ಹಣ ಪಡೆದಿರುತ್ತೇನೆಂದು ಹೇಳಲು ನೆನಪಿರುವುದಿಲ್ಲ. ಸದರಿ ಬ್ಯಾಂಕಿನಿಂದ ಹಣ ಪಡೆದು ಆರೋಪಿತಳಿಗೆ ಹಣ ನೀಡಿದ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಸಲ್ಲಿಸಿರುವುದಿಲ್ಲ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಈಗಲೂ ಇರುವುದಿಲ್ಲ ಎಂದರೆ ಸರಿ.

ಯಾವ ದಿನಾಂಕ, ತಿಂಗಳು ಮತ್ತು ವರ್ಷದಂದು ಆರೋಪಿತಳಿಗೆ ಹಣ ನೀಡಿರುತ್ತೇನೆಂದು ನನಗೆ ನೆನಪಿರುವುದಿಲ್ಲ. ಆರೋಪಿತಳಿಗೆ ಯಾವುದೇ ಹಣ ನೀಡದೆ ಇರುವುದರಿಂದ ಸದರಿ ಹಣದ ವ್ಯವಹಾರದ ದಿನಾಂಕ ತಿಂಗಳು ವರ್ಷ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಹಣ ಪಡೆಯುವ ಕಾಲಕ್ಕೆ ಆರೋಪಿತಳು ಚೆಕ್ಕುಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆ ನೀಡಿರುವುದಿಲ್ಲ.

ಆರೋಪಿತಳಿಗೆ ಮದುವೆಯಾಗಿರುವ ವಿಚಾರ ಗೊತ್ತಿರುತ್ತದೆ. ಆರೋಪಿತಳ ಗಂಡ ಪರಿಚಿತರಿರುತ್ತಾರೆ, ಸಾಕ್ಷಿ ಮುಂದುವರೆದು ಆರೋಪಿತಳ ಕುಟುಂಬದವರು ಎಲ್ಲರೂ ಪರಿಚಿತರುತ್ತಾರೆಂದು ನುಡಿಯುತ್ತಾರೆ. ಆರೋಪಿತಳಿಗೆ ರೂ.15 ಲಕ್ಷ ಹಣ ನೀಡುವ ಸಂಗತಿಯನ್ನು ಆರೋಪಿತಳ ಗಂಡನಿಗೆ ತಿಳಿಸಿರುತ್ತೇನೆ.

ಆದಾಯ ತೆರಿಗೆ ಕುರಿತು ನನಗೆ ಮಾಹಿತಿ ಇರುವುದಿಲ್ಲ. ರೂ.20 ಸಾವಿರಕ್ಕಿಂತ ಹೆಚ್ಚಿಗೆ ಹಣದ ವ್ಯವಹಾರ ಮಾಡುವ ಸಂದರ್ಭದಲ್ಲಿ ನಗದು ರೂಪದಲ್ಲಿ ಕೊಡುವಂತಿಲ್ಲ ಮತ್ತು ಇತರೆ ಸಾಧನಗಳ ಮೂಲಕ ಕೊಡಬೇಕು ಎಂಬ ವಿಚಾರ ನನಗೆ ಗೊತ್ತಿರುತ್ತದೆ. ನನ್ನ ಬಳಿ ರೂ.15 ಲಕ್ಷ ಆರೋಪಿತಳಿಗೆ ಕೊಡುವಷ್ಟು ಸಾಮಾರ್ಥ್ಯ ಇದ್ದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ನೀಡಿರುವುದಿಲ್ಲ, ಸಾಕ್ಷಿಯು ಮುಂದುವರೆದು ನನ್ನ ಗಂಡನ ಬೇಕರಿ ಆದಾಯದಿಂದ ಹಣ ಕೊಟ್ಟಿರುತ್ತೇವೆಂದು ನುಡಿಯುತ್ತಾರೆ. ನನ್ನ ಗಂಡನ ಬೇಕರಿ ಆದಾಯದಿಂದ ಹಣವನ್ನು ಆರೋಪಿತಳಿಗೆ ಕೊಟ್ಟ ಬಗ್ಗೆ ಖಾಸಗಿ ದೂರು, ಪ್ರಮಾಣೀಕೃತ ಹೇಳಿಕೆ ಮತ್ತು ವಕೀಲರ ಮೂಲಕ ಕಳುಹಿಸಿದ ನೋಟಿಸಿನಲ್ಲಿ ನಮೂದಿಸಿರುವುದಿಲ್ಲ.

ಆರೋಪಿತಳು ಹಣ ಪಡೆದ ದಿನಾಂಕದಂದು ನಾಲ್ಕು ಚೆಕ್ಕುಗಳನ್ನು ನನಗೆ ಕೊಟ್ಟಿರುತ್ತಾರೆ. ಆರೋಪಿತಳು ಯಾವ ದಿನಾಂಕದಂದು ಚೆಕ್ಕುಗಳನ್ನು ನೀಡಿರುತ್ತಾರೆಂದು ನಿಖರವಾಗಿ ಹೇಳಲು ಬರುವುದಿಲ್ಲ. ಆರೋಪಿತಳು ಚೆಕ್ಕು ಬುಕ್ ನಲ್ಲಿದ್ದ ಚೆಕ್ಕನ್ನು ನನ್ನ ಸಮಕ್ಷಮ ತೆಗೆದು ಸಹಿ ಮಾಡಿ ಒಂದಾದ ಮೇಲೆ ಒಂದರಂತೆ ನನಗೆ ತೆಗೆದುಕೊಟ್ಟಿರುತ್ತಾಳೆ. ಆರೋಪಿತಳು ಸದರಿ ಚೆಕ್ಕುಗಳನ್ನು ಭರ್ತಿ ಮಾಡಿ ಹಣ ನಮೂದಿಸಿ ಕೊಟ್ಟಿರುತ್ತಾರೆ. ಎಲ್ಲ ಚೆಕ್ಕುಗಳನ್ನು ಒಂದೇ ದಿನಾಂಕ ನಮೂದಿಸಿ ಕೊಟ್ಟಿರುತ್ತಾಳೆ. ಆರೋಪಿತಳು ನೀಡಿರುವ ಚೆಕ್ ನಂಬರ್ ಗಳು ನನಗೆ ನೆನಪಿರುವುದಿಲ್ಲ. ಸದರಿ ಚೆಕ್ ಗಳ ಮೇಲೆ ನಮೂದಿಸಿದ ದಿನಾಂಕ ನನಗೆ ಗೊತ್ತಿರುವುದಿಲ್ಲ. ಸದರಿ ಚೆಕ್ಕುಗಳು ಯಾವ ಬ್ಯಾಂಕಿಗೆ ಸೇರಿದ ಚೆಕ್ಕುಗಳಾಗಿರುತ್ತವೆಂದು ನನಗೆ ಗೊತ್ತಿಲ್ಲ.

ಆರೋಪಿತಳು ನೀಡಿದ ಚೆಕ್ಕುಗಳನ್ನು ಯಾವ ದಿನಾಂಕದಂದು ಬ್ಯಾಂಕಿಗೆ ನಗದೀಕರಣಕ್ಕಾಗಿ ಸಲ್ಲಿಸಿರುತ್ತೇನೆಂದು ದಿನಾಂಕ ಹೇಳಲು ಬರುವುದಿಲ್ಲ. ಯಾವ ದಿನಾಂಕದಂದು ಚೆಕ್ಕುಗಳು ಯಾವ ಕಾರಣಕ್ಕಾಗಿ ಮರಳಿ ಬಂದಿರುತ್ತವೆಂದು ನನಗೆ

ಹೇಳಲು ಬರುವುದಿಲ್ಲ. ಚೆಕ್ಕುಗಳು ಬ್ಯಾಕಿನಿಂದ ಮರಳಿ ಬಂದನಂತರ ಆರೋಪಿತಳನ್ನು ಸಂಪರ್ಕಿಸಿಲ್ಲ. ಆರೋಪಿತಳೊಂದಿಗೆ ಯಾವುದೇ ವ್ಯವಹಾರ ಮಾಡದೆ ಇರುವುದರಿಂದ ವ್ಯವಹಾರದ ಕುರಿತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

ನ್ಯಾಯಾಲಯಕ್ಕೆ ಸಲ್ಲಿಸಿದ ಲಿಸ್ಟ್ ಆಫ್ ಡಾಕ್ಯುಮೆಂಟ್ ನಲ್ಲಿ ಆರೋಪಿತರ ಹೆಸರು ಬೇರೆ ಇದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಿನಾಂಕ.4.12.2017 ರಂದು ಆರೋಪಿಗೆ ನೋಟಿಸ್ ಕಳುಹಿಸಿದ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ದಿ.4.12.2017 ರಂದು ನೋಟಿಸ್ ಕಳುಹಿಸಿರುತ್ತೇನೆಂದು ನನ್ನ ಪಿರ್ಯಾದಿಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ನಮೂದಿಸಿರುತ್ತೇನೆಂದರೆ ನನಗೆ ನೆನಪಿರುವುದಿಲ್ಲ.

ದಿ.28.03.2017 ರಂದು ಆರೋಪಿತಳು ಈ ಪ್ರಕರಣದ ವಿವಾದಿತ ಚೆಕ್ಕುಗಳು ಕಳೆದುಹೋದ ಬಗ್ಗೆ ಬ್ಯಾಂಕಿಗೆ stop payment ಮಾಡುವಂತೆ ಅರ್ಜಿ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಚೆಕ್ಕುಗಳು ಕಳೆದುಹೋದ ಬಗ್ಗೆ ಆರೋಪಿತಳು ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ವಕೀಲರ ಮೂಲಕ ಆರೋಪಿತಳಿಗೆ ಯಾವ ವಿಳಾಸಕ್ಕೆ ನೋಟಿಸ್ ಕಳುಹಿಸಿರುತ್ತೇನೆಂದು ನನಗೆ ನೆನಪಿರುವುದಿಲ್ಲ. ಆರೋಪಿತಳು ನಾನು ನೋಟಿಸ್ ಕಳುಹಿಸುವ ಕಾಲಕ್ಕೆ ಯಾವ ಊರಿನಲ್ಲಿ ಇರುತ್ತಿದ್ದಳು ಎಂದು ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ.

CC No.:168/2019
P.W.:1

**ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.